## ಕಲ್ಪನೆ ಕಾವ್ಯ

# ಬಾ ಗೆಳತಿ

ಬರುವೆಯೇನೇ ಸಖಿ
ಆ ಗೋಡೆಯಿಂದಿಳಿದು
ಈ ಏಣಿಯ ಮೆಟ್ಟಿಲಿಗೆ
ಜಿಗಿಯೋಣ ನಾಗಾಲೋಟದಿ
ಈ ಬಂಧನದ ಬೇಲಿಯನು
ಒಂದೇ ನೆಗೆತಕೆ

ಸುತ್ತಲಿನ ಜಗವನು ಮರೆತು
ದಿಟ್ಟಿಸುವರ ಉರಿನೋಟಕೆ
ಬೆದರದೆ ಇದ್ದರಿರಲಿ ನೂರು ಕೆಲಸ
ಬದುಕಿನ ಸಂತೆಯ ಚಿಂತೆಗಳ
ಬಾಚಿ ನೂಕಿ ಮನದಿಂದಾಚೆಗೆ
ಎಲ್ಲ ಮರೆತು

ಕ್ಷಣಕಾಲ ವಿರಮಿಸುತ
ಮನದ ದುಗುಡಗಳ
ತೋಡಿಕೊಳ್ಳೋಣ
ಕಲ್ಪನಾ ಲೋಕದಿ ವಿಹರಿಸುತ
ನಕ್ಕು ನಲಿದು ಖುಷಿಯನನುಭವಿಸಿ
ಹಗುರಾಗೋಣ

ನಂತರ ಇದ್ದೇ ಇರುವುದಲ್ಲ
ಸಂಸಾರದ ಎಂದೂ
ಮುಗಿಯದ ಜಂಜಾಟಗಳು
ವಾಸ್ತವದ ಬದುಕಿನ
ಪಡಿಪಾಟಲುಗಳು
ಒಂದರಘಳಿಗೆ ಬಾ ಇಳಿದು
ಗೆಳತಿ ಮಾತನಾಡೋಣ

**-ಶಾಂತಲಾ ರಾಜಗೋಪಾಲ್**
**ಬೆಂಗಳೂರು**



# ನಾಕದ ಮೆಟ್ಟಿಲು

ಜಂಜಾಟ, ಕೊಸರಾಟ, ಮೇಲಾಟದಲ್ಲೆಲ್ಲ
ಬೆವರ ಹಂದರಕಿಟ್ಟ ಇಟ್ಟಿಗೆಗೆಳೆಲ್ಲ
ಬ್ರಹ್ಮನಿಟ್ಟೆಯ ಮೇಲೆ ಅರವಟ್ಟಿಗೆಯೇನು
ಬದುಕ ತೇರಿಗಾವುದೀ ನಾಕದ ಮೆಟ್ಟಿಲು?

ನೋಡಲೊಬ್ಬನು ಸದಾ ನೋಟಕ್ಕಿಟ್ಟರೆ
ಕಾಯಕವ ನೀನೇ ಮಾಡಬೇಕಲ್ಲವೇ
ಅಟ್ಟ ಏರುವ ಏಣಿ ಕೂಡಿ ಹಗ್ಗದಿ ಬಾಳ್ವೆ
ವಿಧಿಯ ಮಾತಿಗೆ ಉಲಿಯೂ ಬೇಕಲ್ಲವೇ

ರಂಗುರಂಗಿನ ಹದದ ಚೌಕಟ್ಟು
ಒಂದು ಮಾಡಿವೆ ಮಂದ ಮ್ಲಾನವ
ಎಲ್ಲರೂ ತಲ್ಲೀನ, ಎಲ್ಲರಿಗೂ ಹಂಬಲ
ಹತ್ತುವುದಕೆ ನಾಕದ ಮೆಟ್ಟಿಲು

**-ವಿಶ್ವನಾಥ ಭಟ್, ಧಾರವಾಡ**